# ನಾಡ ಜನರಿಗೊಂದು ಬಹಿರಂಗ ಪತ್ರ

## ಬಿ.ಜೆ.ಪಿ. ಸರ್ಕಾರದ ಬ್ರಾಹ್ಮಣಶಾಹಿ ಫ್ಯಾಸಿಸ್ಟ್ ಕುತಂತ್ರಗಳನ್ನು ಬಯಲಿಗೆಳೆಯೋಣ! ಸರ್ಕಾರದ ಜನವಿರೋಧಿ, ರೈತ ವಿರೋಧಿ ಕೃತ್ಯಗಳ ವಿರುದ್ಧ ಸಮರಶೀಲರಾಗಿ ಹೋರಾಡೋಣ!

### ಪ್ರೀತಿಯ ನಾಡಜನರೆ, ಪ್ರಜಾತಂತ್ರವಾದಿಗಳೆ ಕ್ರಾಂತಿಕಾರಿ ಶುಭಾಶಯಗಳು

ಬ್ರಾಹ್ಮಣಶಾಹಿ ಹಿಂದೂ ಫ್ಯಾಸಿಸ್ಟ್ ಪಕ್ಷ ಬಿಜೆಪಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿದೆ. ಅದಕ್ಕಾಗಿ ಹಲವಾರು ಅಕ್ರಮಗಳನ್ನು ಕುತಂತ್ರಗಳನ್ನು ನಡೆಸಿದೆ. ಅಧಿಕಾರದ ಪ್ರಮಾಣ ವಚನ ಸ್ವೀಕರಿಸುತ್ತಿರುವಾಗಲೇ ನಾಡಿನ ಅನ್ನದಾತರ ವಿರುದ್ಧ ಲಾಠಿ ಬೂಟು ಬಂದೂಕುಗಳನ್ನು ಎತ್ತಿವೆ. ಜನರ ಅಮೂಲ್ಯ ರಕ್ತವನ್ನು ಓಕುಳಿಯಾಡಿ ತನ್ನ ಅಸಲಿ ರೂಪವನ್ನು ಪ್ರದರ್ಶಿಸಿದೆ. ಹಾವೇರಿಯಲ್ಲಿ ಬೀಜ, ಗೊಬ್ಬರ ಸಿಗದೆ ಹೊಟ್ಟೆ ಸಂಕಟದಿಂದ ಹೋರಾಡುತ್ತಿದ್ದಾಗ ಎಲ್ಲಾ ಕಾನೂನು ಕಟ್ಟಳೆಗಳನ್ನು ಗಾಳಿಗೆ ತೂರಿ ಖಾಕಿ ಗೂಂಡಾಗಳು ಏಕಾಏಕಿ ನಡೆಸಿದ ಗುಂಡಿನ ದಾಳಿಗೆ ಈಗಾಗಲೇ ಇಬ್ಬರು ರೈತರು ಪ್ರಾಣ ಕಳೆದುಕೊಂಡಿದ್ದಾರೆ. ಹತ್ತಾರು ರೈತರು ಗಾಯಗೊಂಡು ಆಸ್ಪತ್ರೆ ಸೇರಿದ್ದಾರೆ. ನೂರಾರು ರೈತರನ್ನು ಹಲವು ಸುಳ್ಳು ಕೇಸುಗಳಲ್ಲಿ ಸಿಲುಕಿಸಿ ಚಿತ್ರಹಿಂಸೆ ನೀಡಿ ಬಂದೀಖಾನೆಗಳಲ್ಲಿ ಕೊಳೆಸುತ್ತಿದೆ. ಬೀಜ ಗೊಬ್ಬರಕ್ಕಾಗಿ ಬೀದಿಗಿಳಿದ ರೈತ ಕುಟುಂಬಗಳು ಇಂದು ಬೀದಿಪಾಲಾಗುವಂತಹ ಸ್ಥಿತಿಯನ್ನು ಈ ಸರ್ಕಾರ ಉಂಟುಮಾಡಿದೆ. ಇದೇ ರೈತರ ಹೆಸರಿನಲ್ಲಿ ಪ್ರಮಾಣವಚನ!? ಸ್ವೀಕರಿಸಿದ ಯಡಿಯೂರಪ್ಪರ ಬಿ.ಜೆ.ಪಿ. ಸರ್ಕಾರದ ನಿಜ ರೂಪ. ಇಂತಹ ಇನ್ನಷ್ಟು ಪ್ರಕರಣಗಳು ಮುಂದಿನ ದಿನಗಳಲ್ಲಿ ಹೆಚ್ಚಾಗುತ್ತವೆ. ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಆರ್. ಅಶೋಕ್‌ರಂತಹ ಭೂಗಳ್ಳರು, ಜನಾರ್ಧನ್‌ರೆಡ್ಡಿ, ಶ್ರೀರಾಮುಲು, ಕರುಣಾಕರ ರೆಡ್ಡಿಯಂತಹ ಗಣಿ ದೊರೆಗಳು ಹಾಗೂ ರೌಡಿ ಮಾಫಿಯಾಗಳು ಮಂತ್ರಿಗಳಾಗಿ ಆಯಕಟ್ಟಿನ ಜಾಗಗಳಲ್ಲಿ ಕುಳಿತಿರುವಾಗ, ಚುನಾವಣೆಯಲ್ಲಿ ಆರಿಸಿ ಬರದಿದ್ದರೂ ಆರ್.ಎಸ್.ಎಸ್.ನ ವಿ.ಎಸ್. ಆಚಾರ್ಯನಂತಹ ಹಿಂದೂ ಫ್ಯಾಸಿಸ್ಟ್ ಖೂಳರು ಪೊಲೀಸ್ ಇಲಾಖೆಯನ್ನು ನಿಯಂತ್ರಿಸುವ ಗೃಹಮಂತ್ರಿ ಸ್ಥಾನದಲ್ಲಿ ಕುಳಿತಿರುವಾಗ, ಇನ್ನೆಂತಹ ಘನಕಾರ್ಯಗಳು ನಾಡಜನರಿಗೆ ಒಲಿದು ಬರಲು ಸಾಧ್ಯ ಹೇಳಿ.

ಸರ್ಕಾರ ರಚಿಸಲು ಸರಳ ಬಹುಮತ ಸಿಗದೇ ಅತಂತ್ರ ಸ್ಥಿತಿ ಏರ್ಪಟ್ಟು ಪಕ್ಷೇತರ ಶಾಸಕರನ್ನು ಖರೀದಿಸಿ ಹೇಗೋ ಸರಳ ಬಹುಮತ ಗಳಿಸಿಕೊಂಡರು. ಇದೀಗ ಇತರ ಪಕ್ಷಗಳ ಶಾಸಕರುಗಳನ್ನು ರಾಜೆನಾಮೆ ಕೊಡಿಸಿ ಕುರಿಗಳನ್ನು ಕೊಂಡುಕೊಳ್ಳುವಂತೆ ಕೊಳ್ಳುತ್ತಿದ್ದಾರೆ. ಇದಕ್ಕೆಲ್ಲಾ ಅಭಿವೃದ್ಧಿಯ ಪರದೆ ಬೇರೆ. ಇಂತಹ ಹರಾಮ್‌ಖೋರ ಶಾಸಕರು ಮಂತ್ರಿಗಳಿಂದ ಜನರ ಬವಣೆ ಹೇಗೆ ಪರಿಹಾರವಾಗುತ್ತದೆ? ನಾಡ ರಕ್ಷಣೆ ಹೇಗೆ ಸಾಧ್ಯವಾಗುತ್ತದೆ? ಇಷ್ಟೆಲ್ಲಾ ಮಾಡಿಯೂ ಸರ್ಕಾರ ಸ್ಥಿರತೆಯಿಂದ ಆಳ್ವಿಕೆ ನಡೆಸಲು ಸಾಧ್ಯವೆ ಎಂದರೆ ಅದೂ ಕೂಡ ಕಾಣುತ್ತಿಲ್ಲ. ಬಿಜೆಪಿ ಪಕ್ಷದ ಒಳಜಗಳ ಹೆಚ್ಚುತ್ತಿದೆ. ಅನಂತ ಕುಮಾರ ಬಣ ತನ್ನ ಪ್ರಾಬಲ್ಯಕ್ಕಾಗಿ ಎಲ್ಲಾ ಪ್ರಯತ್ನ ನಡೆಸುತ್ತಿದೆ. ಜಗದೀಶ್ ಶೆಟ್ಟರ್ ಒತ್ತಡಕ್ಕೊಳಗಾಗಿ ಬೂದಿಮುಚ್ಚಿದ ಕೆಂಡದಂತೆ ಇದ್ದಾರೆ. ಗಣಿ ದೊರೆಗಳು ದಿನೇದಿನೇ ತಮ್ಮ ಹಿಡಿತ ಹೆಚ್ಚಿಸಿಕೊಳ್ಳುತ್ತಿದ್ದಾರೆ. ಸರ್ಕಾರ ರಚಿಸಲು ಬೆಂಬಲ ನೀಡಿ ಹಣ ಹಾಗೂ ಮಂತ್ರಿ ಸ್ಥಾನ ಪಡೆದ ಪಕ್ಷೇತರ ಶಾಸಕರು ತಮ್ಮ ಸ್ಥಾನದ ರಕ್ಷಣೆ ಹೇಗೆ ಎಂಬುದರ ಬಗ್ಗೆ ಚಿಂತಿತರಾಗಿದ್ದಾರೆ. ಯೋಗ್ಯ ಲೂಟಿಯ ಸ್ಥಾನ ಸಿಗಲಿಲ್ಲವೆಂದು ಕತ್ತಿ ಮಸೆಯುವ ವ್ಯಕ್ತಿಗಳು ಹೆಚ್ಚುತ್ತಿದ್ದಾರೆ. ಸಾಮಾಜಿಕ ಬಿಕ್ಕಟ್ಟು ತೀವ್ರವಾಗುತ್ತಿರುವುದರ ಪರಿಣಾಮ ಬೆಲೆಯೇರಿಕೆ, ಕೃಷಿ ಬಿಕ್ಕಟ್ಟಿನ ಹೆಚ್ಚಳ, ಆಹಾರ ವಸ್ತುಗಳ ಅಭಾವ, ನಿರುದ್ಯೋಗ ಹೆಚ್ಚಳ, ಬಿತ್ತನೆ ಬೀಜ ಗೊಬ್ಬರ ಅಭಾವ. ಮೊದಲಾದವುಗಳಿಂದಾಗಿ ಸಮಾಜದ ವಿವಿಧ ಜನವರ್ಗಗಳ ಆಕ್ರೋಶ ಹೆಚ್ಚುತ್ತಾ ಜನ ಹೋರಾಟಗಳು ತೀವ್ರಗೊಳ್ಳುತ್ತಿವೆ. ಇದೆಲ್ಲದರ ನೇರ ಪರಿಣಾಮ ಸರ್ಕಾರದ ಸ್ಥಿರತೆಯ ಮೇಲೆ ಆಗುತ್ತದೆ. ಸ್ಥಿರವಾದ ಸರ್ಕಾರ ನಡೆಸಲು ಯಾರಿಗೂ ಸಾಧ್ಯವಿಲ್ಲ. ಇದುವರೆಗೆ ಸರ್ಕಾರ ರೈತರಿಗೆ ಬೀಜ, ಗೊಬ್ಬರ ವಿತರಣೆ ಮಾಡಲು ಸಾಧ್ಯ ಆಗಿಲ್ಲ. ರೈತರ ಸಾಲ ಮನ್ನಾ ಭರವಸೆ ಕೇವಲ ಮಾಮೂಲಿ ಹುಸಿ ಭರವಸೆಯಾಗಿದೆ. ರೈತರಿಗೆ ಉಚಿತ ವಿದ್ಯುತ್ ನೀಡುವ ಯಡಿಯೂರಪ್ಪರ ಚುನಾವಣಾ ಭರವಸೆ ಬಗ್ಗೆ ಅವರೇ ಬೇರೆ ರಾಗ ಹಾಡತೊಡಗಿದ್ದಾರೆ. ರೈತರೊಂದಿಗೆ ಸಂವಾದ, ಕಳ್ಳ ಕಣ್ಣೀರು, ಕಪಟ ಕಾಳಜಿಗಳ ನಾಟಕಗಳು ಮತ್ತೆ ಆರಂಭ ಆಗಿವೆ.

ಅಧಿಕಾರಕ್ಕೇರಿದ ಆರಂಭದಲ್ಲೇ ಸರ್ಕಾರವು ಜನರ ಹೋರಾಟಗಳನ್ನು ರಕ್ತದಲ್ಲಿ ಮುಳುಗಿಸುವ ಸಂದೇಶ ನೀಡಿತು. ನಂತರ ಭಯೋತ್ಪಾದನೆ ಹಾಗೂ ನಕ್ಸಲ್ ನಿಗ್ರಹವನ್ನು ಮಾಡಲಾಗುತ್ತದೆ ಎಂದು ಹೇಳಲಾಯಿತು. ಅದಕ್ಕಾಗಿ

ಭಯೋತ್ಪಾದನಾ ನಿಗ್ರಹ ಪಡೆ ಹಾಗೂ ನಕ್ಸಲ್ ನಿಗ್ರಹ ಪಡೆಯನ್ನು ಬಲಿಷ್ಠಗೊಳಿಸುವುದು, ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ಸಜ್ಜುಗೊಳಿಸುವುದು ಸೇರಿದಂತೆ ಕುದುರೆಮುಖದಲ್ಲಿ ಪೊಲೀಸ್ ತರಬೇತಿ ಕೇಂದ್ರ ತೆರೆದು ಸುಮಾರು 2000ಕ್ಕೂ ಹೆಚ್ಚು ಪೊಲೀಸ್ ಪಡೆಯನ್ನು ಅಲ್ಲಿಗೆ ನಿಯೋಜಿಸಲಾಗುವುದು ಎಂಬ ಗೃಹಮಂತ್ರಿ ಹೇಳಿಕೆ ಹೊರಬಿದ್ದಿದೆ. ಇದ್ದಬದ್ದ ದೇವಸ್ಥಾನಗಳಿಗೆ ಪ್ರದಕ್ಷಿಣೆ ಹಾಕುತ್ತಲೇ ಎಲ್ಲಾ ಕಟ್ಟಾ ಜನವಿರೋಧಿ ಹೇಳಿಕೆಗಳು, ಫ್ಯಾಸಿಸ್ಟ್ ದಮನಕಾಂಡಗಳ ಸೂಚನೆಗಳು ಈ ಆರ್.ಎಸ್.ಎಸ್. ಗೃಹಮಂತ್ರಿಯ ಬಾಯಿಂದ ಉದುರುತ್ತಿವೆ. ಕಲ್ಲುದೇವರ ಮೇಲೆ ಇರುವಷ್ಟು ಕಾಳಜಿ ಇವರಿಗೆ ನಾಡಿನ ಜನರ ಬಗ್ಗೆ ಇಲ್ಲ. ಇರಲು ಸಾಧ್ಯವೂ ಇಲ್ಲ. ರೈತರು ತಮ್ಮ ಬದುಕಿನ ಮೂಲಗಳನ್ನೇ ಕಳೆದುಕೊಳ್ಳುವ ಸಂಕಟದಿಂದ ಬೀದಿಗಿಳಿದು ಹೋರಾಡುತ್ತಿದ್ದಾಗ ಈ ಗೃಹಮಂತ್ರಿ ಪೂಜೆ ಮಾಡುತ್ತಾ, ಸನ್ಮಾನ ಸ್ವೀಕರಿಸುತ್ತಾ ತಮ್ಮ ಊರಿನ ಗೃಹದಲ್ಲಿ ಹಾಯಾಗಿದ್ದರು. ಮುಖ್ಯಮಂತ್ರಿ ಯಡಿಯೂರಪ್ಪ ತನ್ನ ಸರ್ಕಾರ ರಕ್ಷಿಸಿಕೊಳ್ಳಲು ಶಾಸಕರನ್ನು ಒಲಿಸಿಕೊಳ್ಳಲು ಹೋಮ ಹವನ ಮಾಡಿಸುತ್ತಾ, ವಾಸ್ತುಗಳ ಬಗ್ಗೆ ಚಿಂತಿಸುತ್ತಾ 365 ಕೋಟಿ ದೇವರುಗಳ ನಾಮಸ್ಮರಣೆ ಮಾಡುತ್ತಾ ಜಪ ಮಾಡುತ್ತಿದ್ದರು. ಹಾವೇರಿಯಲ್ಲಿ ರೈತರ ಹೆಣ ಉರುಳಿಸಿ ರಾಜ್ಯ ಹೊತ್ತಿ ಉರಿಯಲು ತೊಡಗಿದಾಗ, ತಮ್ಮ ಸರ್ಕಾರದ ಗತಿ ಏನು ಎಂದು ದಿಗಿಲಿನಿಂದ ಬಂದ ಕಣ್ಣೀರನ್ನು ತಡೆಹಿಡಿದು ಓಡಿ ಮೃತ ರೈತನ ಮನೆ ಮುಂದೆ ಕಣ್ಣೀರನ್ನು ಉದುರಿಸಿ ಕರುಣಾಮಯಿಯ ಪೋಜು ನೀಡಿದರು. ನಂತರ ಹೋರಾಡುತ್ತಿರುವ ರೈತರನ್ನು ಪುಂಡರು ಎಂದು ಜರಿದರು! ಇವರು ರೈತರ ಹೆಸರಲ್ಲಿ ಪ್ರಮಾಣವಚನ ಸ್ವೀಕರಿಸಿದ ಮುಖ್ಯಮಂತ್ರಿ ಬೇರೆ.

ಅಧಿಕಾರಕ್ಕೆ ಬಂದ ಒಡನೆಯೇ ಮುಜರಾಯಿ ಇಲಾಖೆಯಿಂದ ಮುಖ್ಯಮಂತ್ರಿ ಪರವಾಗಿ ಎಲ್ಲಾ ದೇವಸ್ಥಾನಗಳಲ್ಲಿ ದಿನವೂ ಪೂಜೆ ಅರ್ಚನೆ ಮಾಡಿಸಬೇಕೆಂಬ ಸುತ್ತೋಲೆ ಹೊರಡಿಸಲಾಯಿತು. ಇದು ನೇರಾನೇರ ಬ್ರಾಹ್ಮಣಶಾಹಿ ಹೇರಿಕೆಯಷ್ಟೇ ಅಲ್ಲದೆ, ದೇವರ ಹೆಸರಿನಲ್ಲಿ ಜನರ ಬೆವರಿನ ಹಣವನ್ನು ದುರುಪಯೋಗ ಮಾಡುತ್ತಿರುವುದಾಗಿದೆ.

ಪ್ರಪಂಚದ ಜನರಿಂದ ತಿರಸ್ಕೃತಗೊಂಡಿರುವ ಗುಜರಾತ್ ಮುಖ್ಯಮಂತ್ರಿ ನರಹಂತಕ ನರೇಂದ್ರ ಮೋದಿ ತಮ್ಮ ಆದರ್ಶವೆಂದು ಬಿಂಬಿಸಿಕೊಂಡವರು ಈ ಸರ್ಕಾರದ ಮಂತ್ರಿಗಳಾಗಿದ್ದಾರೆ. ಇಂತಹವರಿಂದ ನಾಡಿನ ಜನರಿಗೆ ಇನ್ನೇನು ಸಿಗಬಹುದು ಹೇಳಿ. ಮೊದಮೊದಲು ರೈತರ ಆತ್ಮಹತ್ಯೆಗಳಿಗೆ ಮೊಸಳೆ ಕಣ್ಣೀರು ಸುರಿಸುತ್ತಾ ಹುಸಿ ಪರಿಹಾರ ಘೋಷಣೆ ಮಾಡುತ್ತಿದ್ದ ಮುಖ್ಯಮಂತ್ರಿ ಇದೀಗ ರೈತರ ಆತ್ಮಹತ್ಯೆಗಳು ಕುಟುಂಬ ಕಲಹದಿಂದಾಗಿ ಆಗಿರುವಂಥವು, ಹಾಗಾಗಿ ಪರಿಹಾರ ನೀಡುವ ಅಗತ್ಯ ಇಲ್ಲವೆಂಬಂತೆ ಹೇಳುತ್ತಿದ್ದಾರೆ. ಇದು ನಮ್ಮ ಸರ್ಕಾರದ ವಿರುದ್ಧ ನಡೆಸಲ್ಪಡುತ್ತಿರುವ ವ್ಯವಸ್ಥಿತ ಪಿತೂರಿ, ಇದೊಂದು ರಾಜಕೀಯ ಕುಮ್ಮಕ್ಕು ಎಂದು ಹೇಳಿದ್ದಾರೆ. ಗೃಹಮಂತ್ರಿ ಚೆಡ್ಡಿಪ್ರವೀಣ ವಿ.ಎಸ್. ಆಚಾರ್ಯ ರೈತರ ಆತ್ಮಹತ್ಯೆಗಳಿಗೆ ಮಹಿಳೆಯರೇ ಕಾರಣ ಎಂಬಂತೆ ಮಾತನಾಡಿದ್ದಾರೆ. ಇನ್ನು ರೈತರ ಸಮಸ್ಯೆಗಳಿಗೇನು ಪರಿಹಾರ ಸಿಗಬಹುದು ಎಂಬುದನ್ನು ಹೇಳಬೇಕಿಲ್ಲ ತಾನೆ.

## ಬಿ.ಜೆ.ಪಿ ಸರ್ಕಾರದ ಹಿಂದೂ ಫ್ಯಾಸಿಸ್ಟ್ ಗೂಂಡಾಗಿರಿ

ಈಗಾಗಲೇ ಗಣಿ ದೊರೆಗಳ ಹಿಡಿತ ಸರ್ಕಾರದ ಮೇಲೆ ಹೆಚ್ಚತೊಡಗಿದೆ. ಅದೇ ರೀತಿ ಅವರ ಗಣಿ ಹಾಗೂ ಭೂ ಆಕ್ರಮಣಗಳು ಹೆಚ್ಚತೊಡಗಿವೆ. ಇತರ ಪಕ್ಷಗಳ ಶಾಸಕರುಗಳನ್ನು ಕುರಿಗಳಂತೆ ಕಾಸಿಗೆ ಕೊಂಡುಕೊಂಡು ತಂದು ಬಿಜೆಪಿ ಕೊಟ್ಟಿಗೆಗೆ ಕಟ್ಟುತ್ತಿರುವವರು ಇದೇ ಗಣಿ ಮಾಫಿಯಾ ರೆಡ್ಡಿಗಳೆ. ಗೂಂಡಾಗಿರಿ ಕೂಡ ಪ್ರಯೋಗಿಸುತ್ತಿದ್ದಾರೆ. ಭೂ ಕಬಳಿಕೆಯನ್ನು ವಿರೋಧಿಸುವ ದನಿಗಳನ್ನು ಮಟ್ಟಹಾಕುವ ಗೂಂಡಾಗಿರಿ ಸರ್ಕಾರದ ಬೆಂಬಲದಿಂದಲೇ ನಡೆಯುತ್ತಿದೆ. ಉಡುಪಿಯ ಶಾಸಕ ರಘುಪತಿಭಟ್ಟರ ಕ್ರೂರತನ ಅವರ ಪತ್ನಿಯ ಸಾವಿಗೆ ಕಾರಣವಾಗಿದ್ದರೂ ಅದನ್ನು ವ್ಯವಸ್ಥಿತವಾಗಿ ಮುಚ್ಚಿಹಾಕುವ ಹೀನ ಕೆಲಸವನ್ನು ಮಹಾನ್ ಸಂಸ್ಕೃತಿ ಪ್ರತಿಪಾದಕ ಪಕ್ಷದ ಸರ್ಕಾರದಿಂದ ನಡೆದಿದೆ. ರಘುಪತಿ ಭಟ್ಟರ ಕಚ್ಚೆಹರುಕತನ ಹಾಗೂ ಫ್ಯಾಸಿಸ್ಟ್ ಕ್ರೂರತನವನ್ನು ಗೃಹಮಂತ್ರಿಯೇ ಮುಂದೆ ನಿಂತು ಮುಚ್ಚಿಹಾಕುತ್ತಿದ್ದಾರೆ.

ಹೋರಾಡುತ್ತಿರುವ ರೈತರನ್ನು ಹಲವಾರು ಸುಳ್ಳುಕೇಸುಗಳಲ್ಲಿ ಸಿಲುಕಿಸಿ ಚಿತ್ರಹಿಂಸೆ ನೀಡಿ ಬಂಧಿಖಾನೆಯಲ್ಲಿ ಕೊಳೆಸುವ ನೀಚತನ ದಿನೇದಿನೇ ಹೆಚ್ಚಾಗುತ್ತಿದೆ. ಬಡ ಹಾಗೂ ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಶಿಕ್ಷಣದಿಂದ ಸಂಪೂರ್ಣವಾಗಿ ಹೊರಹಾಕುವ ಕುತಂತ್ರ ಹೆಚ್ಚಾಗಿದೆ. ಎಲ್ಲಾ ಸರ್ಕಾರಿ ಶಾಲೆಗಳನ್ನು ಖಾಸಗಿ ಸಂಸ್ಥೆಗಳಿಗೆ ಒಪ್ಪಿಸುವ ದುಷ್ಟ ಯೋಜನೆ ರೂಪಿಸಲಾಗುತ್ತಿದೆ. ಇಸ್ಕಾನ್‌ನಂತಹ ಲೂಟಿಕೋರ ಸಂಸ್ಥೆಗಳಿಗೆ ಈಗಾಗಲೇ ಬಿಸಿಯೂಟ, ಅಕ್ಷರ ದಾಸೋಹದಂತಹ ಯೋಜನೆಗಳನ್ನು ಒಪ್ಪಿಸಿ ಹಣ ಕೊಳ್ಳೆ ಹೊಡೆಯುವ ಅವಕಾಶ ಮಾಡಲಾಗಿದೆ. ಮಂತ್ರಿಮಾಗಧರ ಹೆಂಡತಿ, ಮಕ್ಕಳು ಹಾಗೂ ಬಂಧುಗಳು ನಡೆಸುವ ಸಂಸ್ಥೆಗಳಿಗೆ, ವಿಪ್ರೋದಂತಹ ಸಂಸ್ಥೆಗಳಿಗೆ ಸರ್ಕಾರಿ ಶಾಲೆಗಳನ್ನು ಒಪ್ಪಿಸಿ ಬಹುಸಂಖ್ಯಾತ ಮಕ್ಕಳಿಗೆ ವಿದ್ಯೆಯಿಂದ ವಂಚಿಸಿ ಖಾಸಗಿಯವರ ಖಜಾನೆ ತುಂಬಿಸುವ ಹೀನ ಕೆಲಸಕ್ಕೆ ಮುಂದಾಗಿದೆ. ಇದರ ಮುಂಚೂಣಿಯಲ್ಲಿ ಆರ್.ಎಸ್.ಎಸ್.ನ ವಿಶ್ವೇಶ್ವರ ಹೆಗಡೆ ಕಾಗೇರಿ ನಿಂತಿದ್ದಾರೆ. ಇದೆಲ್ಲದರ ಜೊತೆಗೆ ಪಠ್ಯಪುಸ್ತಕಗಳಲ್ಲಿ ಹಿಂದೂ ಫ್ಯಾಸಿಸ್ಟ್ ಚಿಂತನೆಗಳನ್ನು ತುರುಕಿ ಮಕ್ಕಳ ಮನಸ್ಸಿನಲ್ಲಿ ಕೋಮುವಾದಿ ವಿಷ ತುಂಬುವ ಕಾರ್ಯಗಳು ರಹಸ್ಯವಾಗಿ ನಡೆಯುತ್ತಿವೆ. ಮೋದಿ ಮಾದರಿಯ ವಿಷ ಚಿಂತನೆಗಳನ್ನು ಹರಡುವ ದುಷ್ಟ ತಂತ್ರ ಇದಾಗಿದೆ. ಜೊತೆಗೆ ಮಠಪೀಠಾದಿಗಳಿಗೆ ಜನರ ತೆರಿಗೆಯ ಹಣ ಹರಿಸುವ ಕೆಲಸ ಬೇರೆ ನಡೆಯುತ್ತಿದೆ.

## ಹೆಚ್ಚಲಿರುವ ಎಸ್.ಇ.ಝಡ್ ತರಹದ ಯೋಜನೆಗಳು

## ಬಲಾತ್ಕಾರದ ಒಕ್ಕಲೆಬ್ಬಿಸುವಿಕೆಗಳು

ಸಾಮ್ರಾಜ್ಯಶಾಹಿ ಕಂಪೆನಿಗಳು ಹಾಗೂ ದಲ್ಲಾಳಿ ಕಂಪೆನಿಗಳ ಲೂಟಿಗಾಗಿ ತಲೆ ಎತ್ತಲಿರುವ ಜನರ ನಾಶಕ ಎಸ್.ಇ.ಝಡ್‌ಗಳು, ಖಾಸಗಿ ವಿದ್ಯುತ್ ಸ್ಥಾವರಗಳು, ಡ್ಯಾಮ್‌ಗಳು ಮತ್ತಷ್ಟು ಹೆಚ್ಚಲಿವೆ. ಇವರುಗಳ ಸೇವೆಗೆ ಈ ಬಿಜೆಪಿ ಸರ್ಕಾರ ಟೊಂಕ ಕಟ್ಟಿ ನಿಲ್ಲಲಿದೆ. ಚುನಾವಣೆಗೂ ಮುಂಚೆ ಉಡುಪಿ ಬಳಿಯ ನಂದಿಕೂರು ಉಷ್ಣ ವಿದ್ಯುತ್ ಸ್ಥಾವರವನ್ನು ವಿರೋಧಿಸುತ್ತಿದ್ದ ವಿ.ಎಸ್. ಆಚಾರ್ಯ, ಅಧಿಕಾರ ನೀಡಿದಲ್ಲಿ ನಂದಿಕೂರು ಸ್ಥಾವರ ರದ್ದತಿಗೆ ಶ್ರಮಿಸುತ್ತೇನೆಂದು ಚುನಾವಣೆಯ ಸಂದರ್ಭದಲ್ಲಿ ಹೋರಾಟನಿರತ ಜನರಿಗೆ ಭರವಸೆ ನೀಡಿದವರು, ಈಗ ನಂದಿಕೂರು ಸ್ಥಾವರದ ಅಮೇದ್ಯ ತಿಂದ ಅಮಲಿನಿಂದ ಅದರ ಸ್ಥಾಪನೆಗೆ ಟೊಂಕ ಬಿಗಿದು ನಿಂತಿದ್ದಾರೆ. ಅದೇ ರೀತಿ ಚಾಮಲಾಪುರ ಸ್ಥಾವರ, ಮಂಗಳೂರು, ಹಾಸನ ಮುಂತಾದಲ್ಲಿನ ಎಸ್.ಇ.ಝಡ್.ಗಳು ಈ ಸರ್ಕಾರದ ಸಂಪೂರ್ಣ ಶ್ರೀರಕ್ಷೆಯೊಂದಿಗೆ ಮುಂದುವರಿಯಲಿವೆ. ಈ ಎಲ್ಲಾ ಜನವಿರೋಧಿ ಯೋಜನೆಗಳ ವಿರುದ್ಧ ಧ್ವನಿಯೆತ್ತುತ್ತಿರುವ ಹಾಗೂ ವಿರೋಧಿಸಿ ಹೋರಾಡುವ ಜನರನ್ನು ದಮನಿಸಲು ಪೊಲೀಸ್ ಪಡೆಗಳ ಆಧುನೀಕರಣ ಹಾಗೂ ಹೆಚ್ಚಳಗಳನ್ನು ಮಾಡಲಾಗುತ್ತಿದೆ ಎಂಬುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕಾಗಿದೆ. ಐ.ಟಿ, ಬಿ.ಟಿ.ಗಳ ಹಿತರಕ್ಷಣೆ ಬೇರೆ ಮಾಡಬೇಕು. ಇದೆಲ್ಲದರ ಪರಿಣಾಮವಾಗಿ ಜನರನ್ನು ಒಕ್ಕಲೆಬ್ಬಿಸುವ ಕಾರ್ಯ ಮತ್ತಷ್ಟು ಹೆಚ್ಚುತ್ತವೆ. ಜನರನ್ನು ಒಡೆದಾಳಲು ಜಾತಿ, ಧರ್ಮಗಳ ಬಳಕೆ ಮತ್ತೂ ಹೆಚ್ಚಾಗುವುದರ ಬಗ್ಗೆ ಹೇಳಬೇಕಿಲ್ಲ.

ಈಗಾಗಲೇ ಉಡುಪಿಯ ಪೇಜಾವರ ಮಠಾಧೀಶ ಎಂದೂ ಇಲ್ಲದ ಸುಧಾರಣಾ ಕೆಲಸಗಳಲ್ಲಿ ತೊಡಗಿದ್ದಾರೆ. ನಮ್ಮ ಪಕ್ಷ ಸಂಘಟಿಸುತ್ತಿರುವ ಜನರಿಗೆ ಮಂಕುಬೂದಿ ಎರಚಿ ದಾರಿತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ. ಸರ್ಕಾರದ ಹಣ ಹಾಗೂ ಇತರ ಬೆಂಬಲ ಹೇಗೂ ಇದೆಯಲ್ಲ. ಕೊಳಚೆ ಪ್ರದೇಶಗಳ ಕಬಳಿಕೆಗಳು, ಬಡ ರೈತರ ಭೂ ಕಬಳಿಕೆಗಳು ಹೆಚ್ಚಾಗಿ ಜನಸಾಮಾನ್ಯರ ಜೀವನ ಅಧೋಗತಿಗಿಳಿಯುವ ಕಾರ್ಯಗಳು ವೇಗ ಪಡೆದುಕೊಳ್ಳಲಿವೆ. "ಯಾವ ಅರಸ ಬಂದರೂ ರಾಗಿ ಬೀಸುವುದು ತಪ್ಪಲಿಲ್ಲ" ಎಂಬ ನಾಣ್ಣುಡಿಯ ಬದಲಿಗೆ "ಯಾವ ಅರಸ ಬಂದರೂ ರಾಗಿ ಬೀಸಲಿಕ್ಕೆ ರಾಗಿಯೇ ಇಲ್ಲ, ಇರಲಿಕ್ಕೆ ಸೂರೇ ಇಲ್ಲ" ಎಂಬಂತಾಗುತ್ತದೆ ಜನರ ಸ್ಥಿತಿ.

ಕೈಗಾರೀಕರಣ ಹೋಗಲಿ ಇರುವ ಸಣ್ಣಪುಟ್ಟ ಕೈಗಾರಿಕೆಗಳನ್ನು ಕೂಡ ಮುಚ್ಚಿಸುವ ಕೆಲಸ ತೀವ್ರವಾಗುವುದಲ್ಲದೆ ಸಣ್ಣ ಮತ್ತು ಮಧ್ಯಮ ಚಿಲ್ಲರೆ ವ್ಯಾಪಾರಗಳೂ ಕೂಡ ರಿಲಯನ್ಸ್, ಟಾಟಾರಂತಹ ದೊಡ್ಡ ಕುಳಗಳ ಕೈಗೆ ಒಪ್ಪಿಸಲಾಗುತ್ತದೆ.

ಈಗಾಗಲೇ ಘೋಷಿತವಾಗಿರುವ ಜನವಿರೋಧಿ ಅರಣ್ಯ ಯೋಜನೆಗಳನ್ನು ಬಲಾತ್ಕಾರದಿಂದ ಜಾರಿ ಮಾಡುವ ಯತ್ನ ನಡೆಯುತ್ತದೆ. ಜನವಿರೋಧಿ ಪ್ರಜಾತಂತ್ರ ವಿರೋಧಿ ಕರಾಳ ಕಾನೂನುಗಳ ಜಾರಿಯ ಪ್ರಯತ್ನಗಳು ಹೆಚ್ಚುತ್ತವೆ. ಒಟ್ಟಿನಲ್ಲಿ ಈ ಮಹಾನ್ ಪ್ರಜಾಪ್ರಭುತ್ವದ ಚುನಾವಣಾ ನಾಟಕದಿಂದ ಹೊರಹೊಮ್ಮುವ ಸರ್ಕಾರಗಳು ಇವುಗಳನ್ನಲ್ಲದೆ ಬೇರೇನು ತಾನೆ ಮಾಡಲಾಯಿತು. ಕಳೆದ 60 ವರ್ಷಗಳ ಲೂಟಿಕೋರ ಆಳುವ ವರ್ಗಗಳ ಆಡಳಿತ ಜನರ ಬದುಕನ್ನು ಬದಲಾವಣೆ ಮಾಡಲು ಸಾಧ್ಯವಿಲ್ಲ ಎಂಬುದು ಸ್ಪಷ್ಟವಾಗಿ ಸಾಬೀತಾಗಿದೆ.

## ಆತ್ಮೀಯ ನಾಡಜನರೆ,

ಈಗ ಮುಂದಿರುವುದು ಸಂಘಟಿತ ರಾಜಿರಹಿತ ಹೋರಾಟ ಒಂದೆ. ಅದೊಂದು ಮಾತ್ರವೇ ಜನರನ್ನು ಹಾಗೂ ನಾಡನ್ನು ರಕ್ಷಿಸಿಕೊಳ್ಳುವ ಭರವಸೆ ನೀಡುತ್ತದೆ. ಬಿ.ಜೆ.ಪಿ ಸರ್ಕಾರದ ಎಲ್ಲಾ ಫ್ಯಾಸಿಸ್ಟ್‌ತನಗಳ ವಿರುದ್ಧ, ಅವರುಗಳ ಹಗಲು ದರೋಡೆಗಳ ವಿರುದ್ಧ, ನೀಚ ಕುತಂತ್ರಗಳ ವಿರುದ್ಧ, ಪ್ರಜಾತಾಂತ್ರಿಕ ಹೋರಾಟಗಳ ದಮನದ ವಿರುದ್ಧ, ಅವರು ತರುತ್ತಿರುವ ಜನವಿರೋಧಿ ಯೋಜನೆಗಳ ವಿರುದ್ಧ ಬಲಿಷ್ಠ ಸಂಘಟಿತ ಹೋರಾಟಕ್ಕಿಳಿಯೋಣ. ಸಂಘ ಪರಿವಾರದ ಫ್ಯಾಸಿಸ್ಟ್ ಹುನ್ನಾರಗಳಿಗೆ ಗೋರಿ ತೋಡೋಣ. ಅವರು ಮಾಡಬಹುದಾದ ದಾಳಿಗಳಿಗೆ ಎದಿರೇಟು ನೀಡೋಣ. ರಾಜ್ಯಾದ್ಯಂತ ನಡೆಯುತ್ತಿರುವ ರೈತಾಪಿಗಳ ಪೀರೋಚಿತ ಹೋರಾಟಗಳನ್ನು ಎತ್ತಿಹಿಡಿಯುತ್ತಾ ಸಂಘಟಿತ ಪ್ರತಿರೋಧವನ್ನು ಬಲಿಷ್ಠಗೊಳಿಸೋಣ. ನಕ್ಸಲ್ಬಾರಿ ಹಾದಿಯಲ್ಲಿ ಮಾವೋವಾದಿ ಪಕ್ಷದ ನಾಯಕತ್ವದಲ್ಲಿ ದೇಶಾದ್ಯಂತ ನಡೆಯುತ್ತಿರುವ ಪ್ರಜಾಯುದ್ಧದ ಮೂಲಕ ನವ ಪ್ರಜಾತಾಂತ್ರಿಕ ರಾಜ್ಯಾಧಿಕಾರವನ್ನು ಸ್ಥಾಪನೆ ಮಾಡುವುದರ ಮೂಲಕ ಮಾತ್ರ ಭಾರತದ ಆ ಕೊಳೆತ ಸಾಮಾಜಿಕ ವ್ಯವಸ್ಥೆಯನ್ನು ಬದಲಾವಣೆ ಮಾಡಲು ಸಾಧ್ಯ. ಆದ್ದರಿಂದ ಕರ್ನಾಟಕದಲ್ಲೂ ಮಲೆನಾಡು, ಕರಾವಳಿಗಳಲ್ಲಿ ನಡೆಯುತ್ತಿರುವ ಸಶಸ್ತ್ರ ಕ್ರಾಂತಿಕಾರಿ ಹೋರಾಟವನ್ನು ಬೆಂಬಲಿಸಿ ಸಮರ್ಥಿಸಬೇಕೆಂದು ಮನವಿ ಮಾಡುತ್ತಾ ನಮ್ಮ ಈ ಪತ್ರವನ್ನು ಮುಗಿಸುತ್ತಿದ್ದೇವೆ. ಎಂದೆಂದಿಗೂ ನಿಮ್ಮೊಂದಿಗೆ ಇರುತ್ತೇವೆ.

ಕ್ರಾಂತಿಕಾರಿ ವಂದನೆಗಳೊಂದಿಗೆ,

ರಾಜ್ಯ ಸಮಿತಿ

ಜುಲೈ 2008

ಸಿಪಿಐ (ಮಾವೋವಾದಿ), ಕರ್ನಾಟಕ